ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೭ನೇ ಜೂನ್ ೧೯೯೦, ಜೇಷ್ಠ ೧೭, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧–೦೭ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಬಿಜಾಪುರದಲ್ಲಿ ಹೊಸ ನ್ಯಾಯಾಲಯ ಕಟ್ಟಡ ನಿರ್ಮಾಣ

೨೦೬. ಶ್ರೀ ಸಿ. ಎಸ್. ನಾಡಗೌಡ (ಅಪ್ಪಾಜಿ) (ಮುದ್ದೇಬಿಹಾಳ್ ಕ್ಷೇತ್ರ).— ಮಾನ್ಯ ಯೋಜನಾ, ಕಾನೂನು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರದಲ್ಲಿ ಹೊಸ ನ್ಯಾಯಾಲಯದ ಕಟ್ಟಡವನ್ನು ನಿರ್ಮಾಣ ಮಾಡಲಿಕ್ಕೆ ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ ?

ಇ) ಕೋರ್ಟ್ ಕಾಂಪ್ಲೆಕ್ಸ್ (ಹಳೆಯ ಕಟ್ಟಡ) ಗಳನ್ನು ಸ್ಥಳಾಂತರಿಸಲು ಆರ್ಕಿಟೆಕ್ಚರಲ್ ಕಛೇರಿಯವರು ಖಾಲಿ ಮಾಡುವುದಕ್ಕೋಸ್ಕರ ನ್ಯಾಯಾಲಯದ ಅಧಿಕಾರಿಗಳಿಗೆ ನೋಟೀಸು ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ).—

ಅ) ಹೌದು.

ಆ) ಸರ್ಕಾರವು ಬಿಜಾಪುರದಲ್ಲಿ ನ್ಯಾಯಾಲಯ ಸಂಕೀರ್ಣವನ್ನು ಕಟ್ಟಲು ಭೂಪಟ ಮತ್ತು ರೂ. ೩೭ ಲಕ್ಷದ ಅಂದಾಜಿಗೆ ಮಂಜೂರಾತಿ ನೀಡಿದೆ. ಮುಖ್ಯ ಕಲಾಕಾರರ ಸೂಚನೆಯಂತೆ ಸದರಿ ಕೆಲಸದ ಭೂಪಟವನ್ನು ಮಾರ್ಪಡಿಸಲಾಗಿದೆ ಮತ್ತು ಪರಿಷ್ಕೃತ ಅಂದಾಜನ್ನು ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಛೇರಿಯಲ್ಲಿ ಸಿದ್ಧಪಡಿಸಲಾಗುತ್ತಿದೆ.

ಇ) ಇಲ್ಲ. ಈ ಸ್ಥಿತಿಯನ್ನು ಸ್ಥಿರೀಕರಿಸಲು ಬಿಜಾಪುರ ಜಿಲ್ಲಾನ್ಯಾಯಾಧೀಶರಿಗೆ ಬರೆಯಲಾಗುತ್ತಿದೆ ಎಂದು ಉಚ್ಚನ್ಯಾಯಾಲಯವು ತಿಳಿಸಿದೆ.

ಶ್ರೀ ಸಿ. ಎಸ್. ನಾಡಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈಗಾಗಲೇ ೩೭ ಲಕ್ಷ ರೂಪಾಯಿಗಳ ಪ್ಲಾನ್ ಅಂಡ್ ಎಸ್ಟಿಮೇಟ್ ಅಪ್ರೂವ್ ಮಾಡಲಾಗಿದೆಯೆಂದು ಹೇಳಿದ್ದಾರೆ. ಈಗ ಸುಮಾರು ೧೯೭೨ರಿಂದ ಎಸ್ಟಿಮೇಟ್ ಮಾತ್ರ ರಿವೈಸ್ ಆಗುತ್ತಿದೆ. ಎರಡು ಸಲ ಎಸ್ಟಿಮೇಟ್ ರಿವೈಸ್ ಆದರೂ ಕೂಡ ಕೋರ್ಟ್ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಆಗಿಲ್ಲ. ಅದಕ್ಕೆ ಸಾಕಷ್ಟು ಬೇಡಿಕೆ ಇದ್ದರೂ. ಜನರ ಒತ್ತಡ ಇದ್ದರೂ, ಅಲ್ಲಿಯ ಬಾರ್ ಅಸೋಸಿಯೇಷನ್‌ದವರು ಸರ್ಕಾರದ ಮೇಲೆ ಹಲವಾರು ಸಾರಿ ಒತ್ತಡ ತಂದಿದ್ದಾರೆ. ಆದರೂ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕಟ್ಟಡ ಕಟ್ಟಲಿಕ್ಕೆ ಇರತಕ್ಕ ಖಾಲಿ ಜಾಗವನ್ನು ಸಹ ಸಂರಕ್ಷಣೆ ಮಾಡಲಿಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಅದರ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳುತ್ತೀರಿ, ಯಾವಾಗ ಕೈಗೊಳ್ಳುತ್ತೀರಿ ಎನ್ನುವ ಪ್ರಶ್ನೆಯನ್ನು ತಮ್ಮ ಮುಂದಿಡುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು) ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ನ್ಯಾಯಾಲಯ ಸಂಕೀರ್ಣವನ್ನು ಕಟ್ಟಲು ೩೭ ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿ ಅದನ್ನು ರಿವೈಸ್ ಮಾಡಿ ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಛೇರಿಯಲ್ಲಿ ಪರಿಷ್ಕರಣ ಅಂದಾಜನ್ನು ಸಿದ್ಧಪಡಿಸಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸಚಿವ ಸಂಪುಟದಲ್ಲಿ ಏನಾದರೂ ಬದಲಾವಣೆಯಾಗಿದೆಯೆ ?

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರು ಸರ್ಕಾರಿ ಕೆಲಸದ ಮೇಲೆ ನಾನು ದೆಹಲಿಗೆ ಹೋಗುತ್ತಿದ್ದೆನೆ ಆದ್ದರಿಂದ ಮಾನ್ಯ ಶಿವಣ್ಣನವರು ಉತ್ತರ ಕೊಡುತ್ತಾರೆಂದು ತಿಳಿಸಿದ್ದಾರೆ. ಅದಕ್ಕೆ ಅವರು ಪ್ರಶ್ನೆಗೆ ಉತ್ತರ ಹೇಳುತ್ತಿದ್ದಾರೆ. ನೀವು ಅವರನ್ನು ಅಭಿನಂದಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರು ಬಹಳ ಕಷ್ಟದಲ್ಲಿದ್ದಾರೆ. ಅವರ ಇಲಾಖೆಯ ಬಗ್ಗೆ ಉತ್ತರ ಹೇಳುವುದೇ ಕಷ್ಟ. ಅಂಥಾದ್ದರಲ್ಲಿ ಇನ್ನೊಂದು ಇಲಾಖೆಯ ಬಗ್ಗೆ ಉತ್ತರ ಹೇಳುವುದು ಇನ್ನೂ ಕಷ್ಟ.

ಶ್ರೀ ಬಿ. ಶಿವಣ್ಣ —ನನ್ನ ಇಲಾಖೆಯನ್ನು ತಾವು ಆರ್ಥ ಮಾಡಿಕೊಂಡಿಲ್ಲ. ಪ್ಲಾನ್ ಅಂಡ್ ಎಸ್ಟಿಮೇಟ್ ರಿವೈಸ್ ಆಗಿದೆ. ಬಿಜಾಪುರದಲ್ಲಿ ನ್ಯಾಯಾಲಯದ ಕಟ್ಟಡ ಕಟ್ಟಲಿಕ್ಕೆ ಎಲ್ಲ ತರಹದ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಎಸ್. ನಾಡಗೌಡ.—ಈಗಾಗಲೇ ನಮ್ಮ ಆರ್ಕಿಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಕೋರ್ಟ್ ಕಾಂಪ್ಲೆಕ್ಸ್ ಬದಲಾಯಿಸಿ ನಮ್ಮ ಬಿಲ್ಡಿಂಗ್‌ನ್ನು ನಮಗೇ ಕೊಡಿ ಎಂದು ನೋಟಿಸ್ ಇಷ್ಯೂ ಮಾಡಿದ್ದಾರೆ. ಈ ಬಿಲ್ಡಿಂಗ್‌ನಲ್ಲಿ ಕೊಠಡಿಗಳು ಏನಿವೆ, ಅಲ್ಲಿ ಅಡಿಷನಲ್ ಕೋರ್ಟ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಶುರುಮಾಡುವುದಕ್ಕೆ ಸಾಧ್ಯತೆಗಳು ಇಲ್ಲ. ಇದರಿಂದ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ "Justice delayed is justice denied." ಎಂದು ಇದೆ. ಸುಮಾರು ೧೦-೧೨ ವರ್ಷಗಳಿಂದ ಸೆಶನ್ ಕೋರ್ಟ್‌ನಲ್ಲಿ ಕೇಸುಗಳು ಪೆಂಡಿಂಗ್ ಇವೆ. ಇದರಿಂದ ಬಿಜಾಪುರದ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಬೇಗನೆ ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಸ್ವಂತವಾಗಿ, ತಮ್ಮ ಅರ್ನಿಂಗ್ಸ್ ಸಲುವಾಗಿ ತಮ್ಮ ದೃಷ್ಟಿಯಲ್ಲಿಯೇ ವಿಚಾರ ಮಾಡುತ್ತಾರೆ. ಇದು ಐತಿಹಾಸಿಕವಾದ ಮತ್ತು ಅತಿ ಮಹತ್ವ ಪೂರ್ಣವಾದ ಬಿಲ್ಡಿಂಗ್ ಆಗಿದೆ. ಅದನ್ನು ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರಿಗೆ ಕೊಡುವುದು ಬಹಳ ಅವಶ್ಯಕವಾಗಿದೆ. ೧೯೯೦ರಲ್ಲಿ ಏನೋ ವಿಸಿಟ್ ಇಂಡಿಯಾ ಕಾರ್ಯಕ್ರಮವನ್ನು ಜಪಾನ್ ಸರ್ಕಾರ ಏರ್ಪಾಡು ಮಾಡಿದೆ. ಅದಕ್ಕೋಸ್ಕರ ಆ ಬಿಲ್ಡಿಂಗ್‌ನ್ನು ಯಾವುದೇ ಪರಿಸ್ಥಿತಿಯಲ್ಲಿ ಕೊಡಬೇಕಾದಂಥ ಸಂದರ್ಭ ಬರಬಹುದು. ಕೋರ್ಟ್‌ನಲ್ಲಿ ನಡೆಯತಕ್ಕಂಥ ಕಲಾಪಗಳು ಸ್ಥಗಿತಗೊಳ್ಳುತ್ತವೆ. ಇದರ ಬಗ್ಗೆ ಲಕ್ಷ್ಯವಹಿಸಿ ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿ, ಸರ್ಕಾರ ಈ ಕಡೆ ಗಮನ ಕೊಡಬೇಕೆಂದು ಕೂಡ ತಮ್ಮ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ.—ಹೈಕೋರ್ಟಿನವರು ಡಿಸ್ಟ್ರಿಕ್ಟ್ ಜಡ್ಜ್ ಅವರಿಗೆ ಬರೆಯುತ್ತಿದ್ದಾರೆ. ನಾವು ಕೂಡ ಕರೆಸ್ಪಾಂಡೆನ್ಸ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಷಫಿ ಅಹಮ್ಮದ್ ಅವರೇ ನಿಮ್ಮ ೫೫(೩೪೧)ರ ಪ್ರಶ್ನೆಗೆ ಸಮಯ ಬೇಕಾಗಿದೆ. ಆದ್ದರಿಂದ ಅದನ್ನು ಮುಂದಿನ ಸಾರಿ ತೆಗೆದುಕೊಳ್ಳೋಣ.

ರಾಜ್ಯದಲ್ಲಿ ನೀರಾವರಿ ಯೋಜನೆಗಳ ಪರಿಶೀಲನೆಗೆ ತಾಂತ್ರಿಕ ಸಮಿತಿ

೧೮೨. ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ನೀರಾವರಿ ಯೋಜನೆಗಳ ಪರಿಶೀಲನೆಯ ಬಗ್ಗೆ ತಾಂತ್ರಿಕ ಸಮಿತಿಯನ್ನು (ಟೆಕ್ನಿಕಲ್ ಕಮಿಟಿ) ನೇಮಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?